<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

# <u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 898 /2020</u> .

ಪ್ರಾ.ಸಾ. : 16
ಚಾ.ಸಾ. : 21

| | | |
|---|---|---|
| ಹೆಸರು | : | ಕೆ. ಪಿ. ಗೋಪಾಲ |
| ತಂದೆಯ ಹೆಸರು | : | ಲೇಟ್ ಕೆ. ಜೆ. ಪೂವಯ್ಯ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಸಹಾಯಕ ಸಂರಕ್ಷಣಾಧಿಕಾರಿ ತಿತಿಮತಿ |
| ವಿಳಾಸ | : | ತಿತಿಮತಿ |

… ……………………………………………………………………………………… …

ದಿನಾಂಕ 07 ನೇ ನವೆಂಬರ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ:-</u> <u>ಮಾನ್ಯ ಸ ಸ ಅ ರವರಿಂದ</u> : -

1. ನಾನು ದಿ. 05.10.2020 ರಿಂದ 14.07.2023 ರ ವರೆಗೆ ಸಹಾಯಕ ಸಂರಕ್ಷಣಾಧಿಕಾರಿ ನಾಗರಹೊಳೆ ತಿತಿಮತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ದಿ. 05.10.2020 ರಂದು ನಾಗರಹೊಳೆ ಸಹಾಯಕ ಸಂರಕ್ಷಣಾಧಿಕಾರಿಯಾಗಿ ಪ್ರಭಾರವನ್ನು ವಹಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಸಹಾಯಕ ಸಂರಕ್ಷಣಾಧಿಕಾರಿಯಾಗಿದ್ದ ಚಾಸಾ 20 ರವರ ಕಡೆಯಿಂದ ಕಡತವನ್ನು ಪಡೆದುಕೊಂಡಿರುತ್ತೇನೆ. ಈ ಪ್ರಕರಣದಲ್ಲಿ ಚಾಸಾ 20 ರವರ ತನಿಖೆಯನ್ನು ಪೂರ್ಣಗೊಳಿಸಿರುತ್ತಾರೆ. ನಾನು ದಿ. 19.10.2020 ರಂದು ಕೃತ್ಯ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿರುತ್ತೇನೆ. ನಂತರ ಪ್ರಕರಣಕ್ಕೆ ಸಂಬಂದಿಸಿದ ದಾಖಲಾತಿಗಳು, ಮಹಜರ್, ಸಾಕ್ಷಿಗಳ ಹೇಳಿಕೆಗಳನ್ನು ಹಾಗೂ ಆರೋಪಿತರ ಹೇಳಿಕೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಂತರ ದಿ. 02.11.2020 ರಂದು ಆರೋಪಿತರ ವಿರುದ್ದ ಆರೋಪ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ದಿ. 16.06.2021 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಸಿ.ಎಂ.ಬಿ ತೆಲಂಗಾಣ ಹೈದಾರಾಬಾದ್‌ರವರ ಕಡೆಯಿಂದ FSL ವರದಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹೆಚ್ಚುವರಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಚಾಸಾ 20 ರವರು ಈ ಪ್ರಕರಣ ಚಾಲ್ತಿಯಲ್ಲಿದ್ದಾಗ ಮೃತರಾಗಿರುತ್ತಾರೆ.

3. ಸಾಕ್ಷಿಯು ದಿ. 28.08.2020 ರ ಮಹಜರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿ. ಪಿ. 49 ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ 10 ಭಾವಚಿತ್ರಗಳನ್ನು ನೋಡಿ ಗುರುಸಿತಿದ್ದನ್ನು ಅವುಗಳನ್ನು ನಿ. ಪಿ. 50 ರಿಂದ ನಿ. ಪಿ. 59 ಎಂದು ಗುರುತಿಸಲಾಯಿತು. ದಿ. 26.08.2020 ರ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 60 ಎಂದು ಗುರುತಿಸಲಾಯಿತು. ಸಾಕ್ಷಿಯು ಸಿ. ಡಿ. ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ. ಪಿ. 61 ಎಂದು ಗುರುತಿಸಲಾಯಿತು. ಸಾಕ್ಷಿಯು ಮರಣೋತ್ತರ ಪರೀಕ್ಷೆಯ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 62 ಎಂದು ಗುರುತಿಸಲಾಯಿತು. ಮಾಂಸ ಹಾಗೂ ತ್ವಚೆಯನ್ನು ಪರೀಕ್ಷೆ ಮಾಡಿರುವ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ. ಪಿ. 63 ಎಂದು ಗುರುತಿಸಲಾಯಿತು. ಸಾಕ್ಷಿಯು ಹೆಚ್ಚುವರಿ ಅಂತಿಮ ವರದಿಯ ಜೊತೆ ಸಲ್ಲಿಸಿರುವ ಸಿ. ಸಿ. ಎಂ. ಬಿ ಯ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ. ಪಿ. 64 ಎಂದು ಗುರುತಿಸಲಾಯಿತು. ಸಾಕ್ಷಿಯು FSL ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ. ಪಿ. 65 ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ ಃ ಮುಕ್ತಾಯ.

<u>ಪಾಟೀ ಸವಾಲು</u> :- ಆರೋಪಿತರ ಪರ ಶ್ರೀ ಎಂ. ಸಿ. ಪಿ ವಕೀಲರವರಿಂದ :-

1. ನಿ. ಪಿ. 49 ಮತ್ತು 60 ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ನಿ. ಪಿ. 49 ಮತ್ತು 60 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲಾತಿಗಳನ್ನು ನೋಡಿ ವಿಚಾರ ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ. ನಿ. ಪಿ. 50 ರಿಂದ 59 ಮತ್ತು 61 ದಾಖಲೆಗಳು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳನು ಪರಿಶೀಲನೆ ಮಾಡದೆ ಅಂತಿಮ ವರದಿ ಹಾಗೂ ಹೆಚ್ಚುವರಿ ಅಂತಿಮ ವರದಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ.

2. ಅರಣ್ಯದಲ್ಲಿ ಹುಲಿಗಳ ಕಾದಾಟದಲ್ಲಿ ಸಾಮಾನ್ಯವಾಗಿ ಮೃತಪಟ್ಟಿರುತ್ತದೆ ಎಂದರೆ ಸರಿ. ಆರೋಪಿಗಳು ಅರಣ್ಯ ಪ್ರದೇಶದ ಹತ್ತಿರ ವಾಸವಿರುವ ವ್ಯಕ್ತಿಗಳು ಎಂದರೆ ಸಾಕ್ಷಿಯು ಸುಮಾರು 3 ರಿಂದ 5 ಕಿ. ಮೀ ಅಂತರದಲ್ಲಿ ವಾಸವಿರುತ್ತಾರೆ ಎನ್ನುತ್ತಾರೆ. ಹುಲಿ ಸ್ವಾಭಾವಿಕವಾಗಿ ಅಥವಾ ಅಸ್ವಾಭಾವಿಕವಾಗಿ ಸತ್ತರೆ ಈ ಬಗ್ಗೆ ನಮ್ಮ ಮೇಲಾಧಿಕಾರಿಗಳು ವಿಚಾರಣೆ

ಮಾಡುತ್ತಾರೆ ಎಂದರೆ ಸರಿ. ಆರೋಪಿತರು ಅರಣ್ಯದಲ್ಲಿ ಪ್ರವೇಶ ಮಾಡಿರುವುದಿಲ್ಲ, ಹುಲಿಯನ್ನು ಸಾಯಿಸಿಲ್ಲ, ಹುಲಿಯ ಕೋರೆ ಹಲ್ಲು ಮತ್ತು ಕಾಲುಗಳನ್ನು ಕತ್ತರಿಸಿಲ್ಲ, ಹಾಗೂ ಉಗುರುಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ವಿಚಾರಣೆ ಮಾಡದೆ ಸುಳ್ಳು ಪ್ರಕರಣವನ್ನು ದಾಖಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ. ಪಿ. 64 ಮತ್ತು 65 ಬೇರೆ ಪ್ರಕರಣಕ್ಕೆ ಸಂಬಂದಪಟ್ಟ ದಾಖಲೆಯನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಜಿಂಕೆಯನ್ನು ಹತ್ಯೆ ಮಾಡಿಲ್ಲ ಹಾಗೂ ಅದರ ಮಾಂಸವನ್ನು ಇಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮನೆಗೆ ಹೋಗದೆ ಕಚೇರಿಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರ ಮನೆಯಿಂದ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾರ್ವಜನಿಕರನ್ನು ನಮ್ಮ ಕಚೇರಿಗೆ ಕರೆದು, ಮಹಜರ್‌ಗೆ ಕಚೇರೀಯಲ್ಲಿ ಸಹಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಸಾಕ್ಷ್ಯಕ್ಕೂ, ಮು. ಮಾ ಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಮುಕ್ತಾಯ.

<u>ಮರುವಿಚಾರಣೆ</u> :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)